ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

## ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-5/2015-16, ದಿನಾಂಕ: 22.03.2016**

# 72 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ

* * * * *

**ವಿಷಯ:** 72 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ದಿನಾಂಕ: 20.02.2017 ರಿಂದ ಮೂಲ ದಾಖಲೆಗಳ ಪರಿಶೀಲನೆ, ದೇಹ ದಾರ್ಢ್ಯತೆ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಹಾಗೂ ದೈಹಿಕ ತಾಳ್ವಿಕೆ ಪರೀಕ್ಷೆಗಳ ಫಲಿತಾಂಶದ ಕುರಿತು

**ಉಲ್ಲೇಖ:** ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ವೃತ್ತ, ಧಾರವಾಡ ಇವರ ಕಛೇರಿ ಪತ್ರ ಸಂಖ್ಯೆ: ಎ3/ಸಿಬ್ಬಂದಿ/ವವ/ನೇನೆ/ಸಿಆರ್-45/2016-17/2664 ದಿನಾಂಕ: 27.02.2017

* * * * * *

ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-5/2015-16, ದಿನಾಂಕ: 22.03.2016 ರಲ್ಲಿ 72 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ದಿನಾಂಕ: 20.02.2017 ರಿಂದ ಮೂಲ ದಾಖಲೆಗಳ ಪರಿಶೀಲನೆ, ದೇಹ ದಾರ್ಢ್ಯತೆ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಹಾಗೂ ದೈಹಿಕ ತಾಳ್ವಿಕೆ ಪರೀಕ್ಷೆಗಳನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ವೃತ್ತ, ಧಾರವಾಡ ಇವರು ನಡೆಸಿರುತ್ತಾರೆ. ಈ ಪರೀಕ್ಷೆಗಳ ವಿವರ ಈ ಕೆಳಕಂಡಂತಿದೆ.

| | | |
|---|---|---|
| 1 | 1:2 ಹುದ್ದೆ/ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯಲ್ಲಿ ಇರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ | 130 |
| 2 | ಮೂಲ ದಾಖಲೆಗಳು ಹಾಗೂ ಇನ್ನಿತರೆ ಪರೀಕ್ಷೆಗಳಿಗೆ ಗೈರು ಹಾಜರಾದ ಅಭ್ಯರ್ಥಿಗಳ ಸಂಖ್ಯೆ | 5 |

**ಮೂಲ ದಾಖಲೆಗಳ ಪರಿಶೀಲನೆಗೆ ಗೈರು ಹಾಜರಾದ ಅಭ್ಯರ್ಥಿಗಳ ವಿವರ ಈ ಕೆಳಕಂಡಂತಿದೆ.**

| ಕ್ರಸಂ. | ನೋಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು |
|---|---|---|
| 1 | 10233 | PRASHANTH GANAPATHI NAIK |
| 2 | 10297 | NATARAJ |
| 3 | 10172 | DINESH B B |
| 4 | 10047 | BHARATH M K |
| 5 | 10080 | MADHUSUDHANA REDDY B |

ಈ ಮೇಲ್ಕಂಡ 5 ಅಭ್ಯರ್ಥಿಗಳು ನಿಗಧಿತ ದಿನಾಂಕದಂದು ಸದರಿ ಪರೀಕ್ಷೆಗಳಿಗೆ ಗೈರು ಹಾಜರಾಗಿರುವುದರಿಂದ ಈ 5 ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

**ಮೂಲ ದಾಖಲೆಗಳ ಪರೀಕ್ಷೆಯಲ್ಲಿ ಅಭ್ಯರ್ಥಿಪರ ಕಂಡುಬಂದ ನ್ಯೂನ್ಯತೆಗಳು ಈ ಕೆಳಕಂಡಂತಿದೆ.**

| ಕ್ರಸಂ. | ನೋಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು | ವಿವರ |
|---|---|---|---|
| 1 | 21524 | ASHA B N | ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-5/2015-16, ದಿನಾಂಕ: 22.03.2016 ರ ಕಂಡಿಕೆ 7.1 ರಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 17.05.2016 ಆಗಿದ್ದು, ಈ ದಿನಾಂಕದೊಳಗೆ ಪಡೆದಿರುವ ಎಲ್ಲಾ ದಾಖಲೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎನ್ನಲಾಗಿದೆ. ಆದರೆ, ಸದರಿ ಅಭ್ಯರ್ಥಿಯು 3ಎ ಮೀಸಲಾತಿ ಪ್ರಮಾಣ ಪತ್ರವನ್ನು ದಿನಾಂಕ: 18.05.2016 ರಂದು ತಹಶೀಲ್ದಾರ್, ನಾಗಮಂಗಲ ತಾಲ್ಲೂಕು, ಮಂಡ್ಯ ಇವರಿಂದ ಪಡೆದಿರುತ್ತಾರೆ ಹಾಗೂ ದಾಖಲಾತಿಯನ್ನು ಪರಿಶೀಲನೆಗೆ ಸಲ್ಲಿಸಿರುತ್ತಾರೆ. ಹೀಗಾಗಿ, ನಿಗಧಿತ ದಿನಾಂಕದ ನಂತರ ಪಡೆದಿರುವ ದಾಖಲೆಗಳನ್ನು |

| | | | |
|---|---|---|---|
| | | | ಪರಿಗಣಿಸಲು ನಿಯಮಾವಳಿಗಳಲ್ಲಿ ಅವಕಾಶವಿಲ್ಲದಿರುವುದರಿಂದ 3ಎ ಮೀಸಲಾತಿ ಇವರಿಗೆ ಅನ್ವಯಿಸುವುದಿಲ್ಲ. |

ಕುಮಾರಿ ಜ್ಯೋತಿ ಎಸ್. ಸಿ., ನೋಂದಣಿ ಸಂಖ್ಯೆ: 22204 ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇನ್ಟಿಗ್ರೇಟೆಡ್ ಬ್ಯಾಚುಲರ್ ಆಫ್ ಸೈನ್ಸ್ – ಮಾಸ್ಟರ್ ಆಫ್ ಸೈನ್ಸ್ ನಲ್ಲಿ ಬೈಯೋಲಾಜಿಕಲ್ ಸೈನ್ಸ್ ಪದವಿಯನ್ನು ಪಡೆದಿರುತ್ತಾರೆ. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9–ವಅಅ–ವಿವ–5/2015–16, ದಿನಾಂಕ: 22.03.2016 ರ ಕಂಡಿಕೆ 4 ರಲ್ಲಿ ನಮೂದಿಸಿರುವಂತೆ ಸದರಿ ಅಭ್ಯರ್ಥಿಯು ಅರ್ಹತೆ ಹೊಂದುವ ಕುರಿತು ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ಪಷ್ಟೀಕರಣವನ್ನು ಮುಂದಿನ ದಿನದಲ್ಲಿ ಪಡೆಯಲಾಗುವುದು. ಸದರಿ ವಿಶ್ವವಿದ್ಯಾಲಯದಿಂದ ಅಭ್ಯರ್ಥಿಯ ಪರ ವಲಯ ಅರಣ್ಯಾಧಿಕಾರಿ ಹುದ್ದೆಗೆ ಅರ್ಹತೆ ಹೊಂದುವ ವಿದ್ಯಾರ್ಹತೆಯನ್ನು ಅಭ್ಯರ್ಥಿಯು ಹೊಂದಿದಲ್ಲಿ ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡಲಾಗುವುದು.

**ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರ ನೇತೃತ್ವದಲ್ಲಿ ನಡೆದ ವೈದ್ಯಕೀಯ ಮಂಡಳಿಯು ನಡೆಸಿದ ವೈದ್ಯಕೀಯ ಪರೀಕ್ಷೆಯಲ್ಲಿ ಈ ಕೆಳಕಂಡ ಅಭ್ಯರ್ಥಿಗಳು ವಿವಿಧ ಕಾರಣಗಳ ಹಿನ್ನಲೆಯಲ್ಲಿ ಅನರ್ಹತೆ ಹೊಂದಿದ್ದು, ವಿವರ ಈ ಕೆಳಕಂಡಂತಿದೆ.**

| ಕ್ರ.ಸಂ. | ನೋಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು | ವಿವರ |
|---|---|---|---|
| 1 | 10034 | RATHOD L B | ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9–ವಅಅ–ವಿವ–5/2015–16, ದಿನಾಂಕ: 22.03.2016 ರ ಕಂಡಿಕೆ 10.2 ರ ಪ್ರಕಾರ ಪುರಷರಿಗೆ ಕನಿಷ್ಠ ಎತ್ತರ 163 ಸೆ.ಮೀ. ಇರಬೇಕಾಗಿರುತ್ತದೆ. ಸದರಿ ಅಭ್ಯರ್ಥಿಯ ವೈದ್ಯಕೀಯ ಪರೀಕ್ಷೆ ಅನ್ವಯ ಸದರಿ ಅಭ್ಯರ್ಥಿಯ ಎತ್ತರ 160 ಸೆ.ಮೀ. ಇರುತ್ತದೆ ಹಾಗೂ ಪುರುಷರ ಎದೆಯ ಸುತ್ತಳತೆ ಸಾಮಾನ್ಯ ಸ್ಥಿತಿಯಲ್ಲಿ 79 ಸೆ.ಮೀ. ಇರಬೇಕಾಗಿದ್ದು, ಕನಿಷ್ಠ ಹಿಗ್ಗುವಿಕೆ 5 ಸೆ.ಮೀ. ಇರಬೇಕಾಗಿರುತ್ತದೆ. ವೈದ್ಯಕೀಯ ಪರೀಕ್ಷೆಯ ಅನ್ವಯ ಸದರಿ ಅಭ್ಯರ್ಥಿಯ ಎದೆಯ ಸುತ್ತಳತೆ ಸಾಮಾನ್ಯ ಸ್ಥಿತಿಯಲ್ಲಿ 84 ಸೆ.ಮೀ. ಇದ್ದು, ಎದೆಯನ್ನು ಹಿಗ್ಗಿಸಿದಾಗ 87 ಸೆ.ಮೀ. ಇರುವುದಾಗಿ ವೈದ್ಯಕೀಯ ಮಂಡಳಿಯು ವರದಿ ನೀಡಿರುತ್ತಾರೆ. ಹೀಗಾಗಿ, ಸದರಿ ಅಭ್ಯರ್ಥಿಯು 3 ಸೆ.ಮೀ. ಎದೆಯನ್ನು ಹಿಗ್ಗಿಸಿರುತ್ತಾರೆ. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರು Physical Standards ನಲ್ಲಿ Unfit ಎಂದು ವರದಿ ನೀಡಿರುತ್ತಾರೆ. ಹೀಗಾಗಿ, ಇವರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. |
| 2 | 10220 | P GANGA | ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9–ವಅಅ–ವಿವ–5/2015–16, ದಿನಾಂಕ: 22.03.2016 ರ ಕಂಡಿಕೆ 10.3 ರ ಪ್ರಕಾರ ಮಹಿಳೆಯರಿಗೆ ಕನಿಷ್ಠ ಎತ್ತರ 150 ಸೆ.ಮೀ. ಇರಬೇಕಾಗಿರುತ್ತದೆ. ಸದರಿ ಅಭ್ಯರ್ಥಿಯ ವೈದ್ಯಕೀಯ ಪರೀಕ್ಷೆ ಅನ್ವಯ ಸದರಿ ಅಭ್ಯರ್ಥಿಯ ಎತ್ತರ 149 ಸೆ.ಮೀ. ಇರುತ್ತದೆ. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರು Physical Standards ನಲ್ಲಿ Unfit ಎಂದು ವರದಿ ನೀಡಿರುತ್ತಾರೆ ಹಾಗೂ Vericose veins ನಲ್ಲಿಯೂ ನಿಗಧಿತ ಮಾನದಂಡವನ್ನು ಹೊಂದದೆ ಇರುವುದರಿಂದ ಸದರಿ ಅಭ್ಯರ್ಥಿಯನ್ನು ವೈದ್ಯಕೀಯ ಪರೀಕ್ಷೆಯಲ್ಲಿ Unfit ಎಂದು ವರದಿ ನೀಡಿರುತ್ತಾರೆ. ಹೀಗಾಗಿ, ಇವರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. |
| 3 | 10065 | GAJENDRA C V | ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9–ವಅಅ–ವಿವ–5/2015–16, ದಿನಾಂಕ: 22.03.2016 ರ ಕಂಡಿಕೆ 10.2 ರ ಪ್ರಕಾರ ಪುರಷರಿಗೆ ಕನಿಷ್ಠ ಎತ್ತರ 163 ಸೆ.ಮೀ. ಇರಬೇಕಾಗಿರುತ್ತದೆ. ಸದರಿ ಅಭ್ಯರ್ಥಿಯ ವೈದ್ಯಕೀಯ ಪರೀಕ್ಷೆ ಅನ್ವಯ ಸದರಿ ಅಭ್ಯರ್ಥಿಯ ಎತ್ತರ 162 ಸೆ.ಮೀ. ಇರುತ್ತದೆ ಹಾಗೂ ಪುರುಷರ ಎದೆಯ ಸುತ್ತಳತೆ ಸಾಮಾನ್ಯ ಸ್ಥಿತಿಯಲ್ಲಿ 79 ಸೆ.ಮೀ. ಇರಬೇಕಾಗಿದ್ದು, ಕನಿಷ್ಠ ಹಿಗ್ಗುವಿಕೆ 5 ಸೆ.ಮೀ. ಇರಬೇಕಾಗಿರುತ್ತದೆ. ವೈದ್ಯಕೀಯ ಪರೀಕ್ಷೆಯ ಅನ್ವಯ ಸದರಿ ಅಭ್ಯರ್ಥಿಯ ಎದೆಯ ಸುತ್ತಳತೆ ಸಾಮಾನ್ಯ ಸ್ಥಿತಿಯಲ್ಲಿ 82 ಸೆ.ಮೀ. ಇದ್ದು, ಎದೆಯನ್ನು ಹಿಗ್ಗಿಸಿದಾಗ 86 ಸೆ.ಮೀ. ಇರುವುದಾಗಿ ವರದಿ |

| | | | |
|---|---|---|---|
| | | | ನೀಡಿರುತ್ತಾರೆ. ಹೀಗಾಗಿ, ಸದರಿ ಅಭ್ಯರ್ಥಿಯು 4 ಸೆ.ಮೀ. ಎದೆಯನ್ನು ಹಿಗ್ಗಿಸಿರುತ್ತಾರೆ. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರು Physical Standards ನಲ್ಲಿ Unfit ಎಂದು ವರದಿ ನೀಡಿರುತ್ತಾರೆ. ಹೀಗಾಗಿ, ಇವರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. |
| 4 | 10295 | WASIM MOHAMMAD B SHAIKH | ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-5/2015-16, ದಿನಾಂಕ: 22.03.2016 ರ ಕಂಡಿಕೆ 10.2 ರ ಪ್ರಕಾರ ಪುರುಷರಿಗೆ ಕನಿಷ್ಠ ಎತ್ತರ 163 ಸೆ.ಮೀ. ಇರಬೇಕಾಗಿರುತ್ತದೆ. ಸದರಿ ಅಭ್ಯರ್ಥಿಯ ವೈದ್ಯಕೀಯ ಪರೀಕ್ಷೆ ಅನ್ವಯ ಸದರಿ ಅಭ್ಯರ್ಥಿಯ ಎತ್ತರ 162 ಸೆ.ಮೀ. ಇರುತ್ತದೆ. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರು Physical Standards ನಲ್ಲಿ Unfit ಎಂದು ವರದಿ ನೀಡಿರುತ್ತಾರೆ. ಹೀಗಾಗಿ, ಇವರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. |

ಶ್ರೀ ಸೋಮಶೇಖರ್ ಜೆ., ನೋಂದಣಿ ಸಂಖ್ಯೆ: 10272 ಇವರ ಕುರಿತು ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರು ಸದರಿ ಅಭ್ಯರ್ಥಿಯ ಶ್ರವಣ ಶಕ್ತಿಯ ತಪಾಸಣೆಯನ್ನು ಹೊರತುಪಡಿಸಿ, ಇನ್ನಿತರೆ ವೈದ್ಯಕೀಯ ಪರೀಕ್ಷೆಗಳಲ್ಲಿ ಅರ್ಹ ಹೊಂದಿರುವುದಾಗಿ ವರದಿ ನೀಡಿರುತ್ತಾರೆ. ಸದರಿ ಅಭ್ಯರ್ಥಿಯ ಶ್ರವಣ ಶಕ್ತಿಯ ತಪಾಸಣೆಯನ್ನು All India Insitute of Speech & Hearing, Mysore ನ ಆಸ್ಪತ್ರೆಯಲ್ಲಿ ಸದ್ಯದಲ್ಲಿಯೇ ನಡೆಸಲಾಗುವುದು. ಇವರ ಆಯ್ಕೆಯು ಈ ವೈದ್ಯಕೀಯ ವರದಿಯ ಫಲಿತಾಂಶಕ್ಕೆ ಬದ್ಧವಾಗಿರುತ್ತದೆ.

**ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆ ವಿವರ**

| ಕ್ರಸಂ. | ನೋಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು | ಕಂಡುಬಂದ ನ್ಯೂನ್ಯತೆಗಳು |
|---|---|---|---|
| 1 | 10011 | MANJUNATH DADDIMANI | ಈ ಇಬ್ಬರು ಅಭ್ಯರ್ಥಿಗಳು ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಯಲ್ಲಿ ಗೈರುಹಾಜರಾಗಿರುತ್ತಾರೆ. ಹೀಗಾಗಿ, ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. |
| 2 | 10195 | KAVYA SHREEPAD RAYSAD | |
| 3 | 10248 | S MOHAMMED JUNAID AKTHAR | ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-5/2015-16, ದಿನಾಂಕ: 22.03.2016 ಕಂಡಿಕೆ 11.4 ರಲ್ಲಿ ಪುರುಷ ಅಭ್ಯರ್ಥಿಗಳಿಗೆ 25 ಕಿ.ಮೀ. ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಯನ್ನು ಗರಿಷ್ಠ 4 ಗಂಟೆಯ ಅವಧಿಯಲ್ಲಿ ಪೂರೈಸಬೇಕೆಂಬ ಷರತ್ತನ್ನು ವಿಧಿಸಲಾಗಿರುತ್ತದೆ. ಯಾವುದೇ ಸಂದರ್ಭದಲ್ಲಿ ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಯಲ್ಲಿ ಅನರ್ಹರಾದ ಅಭ್ಯರ್ಥಿಗಳಿಗೆ ಎರಡನೇ ಬಾರಿ ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಗೆ ಅವಕಾಶ ನೀಡಲಾಗುವುದಿಲ್ಲ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ. ಸದರಿ ಈ ಇಬ್ಬರು ಅಭ್ಯರ್ಥಿಗಳು ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಯಲ್ಲಿ Discontinuted ಆಗಿರುತ್ತಾರೆ.<br><br>ನಿಗದಿಪಡಿಸಿದ 25 ಕಿ.ಮೀ. ದೂರವನ್ನು ಕ್ರಮಿಸುವ ಮಾರ್ಗದ ಮಧ್ಯದಲ್ಲಿಯೇ ಕಾಲ್ನಡಿಗೆ ಪರೀಕ್ಷೆಯಿಂದ ಹಿಂದಕ್ಕೆ ಸರಿದಿರುತ್ತಾರೆ.<br><br>ಎಲ್ಲಾ ಅಭ್ಯರ್ಥಿಗಳ ಕಾಲ್ನಡಿಗೆಯ ಪರೀಕ್ಷೆ ಪೂರ್ಣಗೊಂಡ ನಂತರ ಈ ಇಬ್ಬರು ಅಭ್ಯರ್ಥಿಗಳು ಲಿಖಿತ ರೂಪದಲ್ಲಿ ತನ್ನ ಕಾಲ್ನಡಿಗೆ ಪರೀಕ್ಷೆಯ ಕುರಿತು ನಮೂದಿಸಿರುವ ಮಾಹಿತಿ ಸರಿಯಾಗಿದೆ ಎಂದು ದೃಢೀಕರಿಸಿ, ನಿಗಧಿತ ನಮೂನೆಯಲ್ಲಿ ಸಹಿ ಮಾಡಿರುತ್ತಾರೆ.<br><br>ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ |
| 4 | 29578 | PUNITH NANJARAY M | |

| | | | | |
|---|---|---|---|---|
| | | | | ನಿಯಮದಂತೆ ಹಾಗೂ ಸದರಿ ಅಧಿಸೂಚನೆಯಂತೆ ಸದರಿ ಅಭ್ಯರ್ಥಿಯು ಅನರ್ಹ ಹೊಂದಿರುತ್ತಾರೆ. ಹೀಗಾಗಿ, ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. |
| 5 | 10350 | HARSHA K G | | ಸದರಿ ಅಭ್ಯರ್ಥಿಯು ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಯನ್ನು ದಿನಾಂಕ: 22.02.2017 ರಂದು ಬೆಳಿಗ್ಗೆ 7.00 ಗಂಟೆಗೆ ಪ್ರಾರಂಭಿಸಿದ್ದು, ಬೆಳಿಗ್ಗೆ 11.25 ಗಂಟೆಗೆ ಪೂರ್ಣಗೊಳಿಸಿರುತ್ತಾರೆ. ಇವರು ಕಾಲ್ನಡಿಗೆ ಪರೀಕ್ಷೆಗೆ ತೆಗೆದುಕೊಂಡ ಒಟ್ಟು ಸಮಯ 4 ಗಂಟೆ 25 ನಿಮಿಷ ಆಗಿರುತ್ತದೆ.<br><br>ನಿಗಧಿತ 4 ಗಂಟೆಯ ಅವಧಿಯಲ್ಲಿ ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಯನ್ನು ಸದರಿ ಅಭ್ಯರ್ಥಿಯು ಪೂರ್ಣಗೊಳಿಸಿರುವುದಿಲ್ಲ. ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮದಂತೆ ಹಾಗೂ ಸದರಿ ಅಧಿಸೂಚನೆಯಂತೆ ಸದರಿ ಅಭ್ಯರ್ಥಿಯು ಅನರ್ಹ ಹೊಂದಿರುತ್ತಾರೆ. ಹೀಗಾಗಿ, ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. |

ಶ್ರೀಮತಿ ನವ್ಯ ಹೆಚ್. ಎನ್., ನೋಂದಣಿ ಸಂಖ್ಯೆ: 22934 ಇವರು ಈ ಕಛೇರಿಗೆ ಅರ್ಜಿ ಸಲ್ಲಿಸಿ, ತಾನು ತುಂಬು ಗರ್ಭಿಣಿಯಾಗಿರುವುದರಿಂದ ದಿನಾಂಕ: 22.02.2017 ರಂದು ನಡೆಯುವ ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಯಲ್ಲಿ ಭಾಗವಹಿಸಲು ಸದ್ಯಕ್ಕೆ ಸಾಧ್ಯವಾಗದೇ ಇರುವುದರಿಂದ ಸ್ವಲ್ಪ ಕಾಲಾವಕಾಶ ಕೋರಿ ಈ ಪರೀಕ್ಷೆಯಿಂದ ವಿನಾಯಿತಿ ನೀಡಲು ಕೋರಿರುತ್ತಾರೆ. ಈ ಬಗ್ಗೆ ವೈದ್ಯಕೀಯ ವರದಿಯನ್ನು ಸಹ ಸಲ್ಲಿಸಿರುತ್ತಾರೆ ಹಾಗೂ ಮುಂದಿನ ಹಂತದಲ್ಲಿ ಈ ಪರೀಕ್ಷೆಗೆ ಹಾಜರಾಗಲು ಅನುಮತಿ ಕೋರಿರುತ್ತಾರೆ. ಸದರಿ ಅಭ್ಯರ್ಥಿಯು ತುಂಬು ಗರ್ಭಿಯಾಗಿರುವುದರಿಂದ ಪ್ರಸ್ತುತ ನಡೆಯುವ ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆಗೆ ಭಾಗವಹಿಸಲು ವಿನಾಯಿತಿ ನೀಡಲಾಗಿದೆ. ಸದರಿ ಅಭ್ಯರ್ಥಿಯು ಒಂದು ವೇಳೆ 1:1 (ಹುದ್ದೆ / ಅಭ್ಯರ್ಥಿ) ಪಟ್ಟಿಯಲ್ಲಿ ಆಯ್ಕೆ ಹೊಂದಿದಲ್ಲಿ, ಸದರಿ ಅಭ್ಯರ್ಥಿಯ ಕುರಿತು ಮುಂದಿನ ದಿನಗಳಲ್ಲಿ ದೈಹಿಕ ತಾಳ್ವಿಕೆ (ಕಾಲ್ನಡಿಗೆ) ಪರೀಕ್ಷೆ ನಡೆಸಿ, ಈ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದರೆ ಮಾತ್ರ ನೇಮಕಾತಿ ಆದೇಶ ನೀಡಲಾಗುವುದು.

ಬೆಂಗಳೂರು
ದಿನಾಂಕ: 15-03-2017

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)